ಹಿಂದೆ ಹೋಗುತ್ತಿತ್ತು. ಸೂರ್ಯ ಬಿಸಿಯಾಗತೊಡಗಿದ್ದ, ಆಕಾಶ ತಿಳಿಯಾಗಿತ್ತು.

ಅವರು ಇನ್ನೇನು ಮುಖ್ಯ ರಸ್ತೆ ಹತ್ತಿರ ಬಂದರು ಅನ್ನುವಾಗ, ಗಾಡಿ ಹೊಡೆಯುತ್ತಿದ್ದವನು ಇದ್ದಕ್ಕಿದ್ದಂತೆ ಮಾತನಾಡಿದ:

'ನೋಡಿ ಅಮ್ಮ, ಮುಂದಿನ ಬೇಸಿಗೆಗೆ ನನ್ನ ಕಿರಿಯ ತಮ್ಮನನ್ನು ಕಳುಸ್ತೀನಿ. ಅವನು ಕುರಿಗಳನ್ನ ಚೆನ್ನಾಗಿ ನೋಡಿಕೊಳ್ತಾನೆ ಅನ್ನೋ ನಂಬಿಕೆ ನನಗಿದೆ.'

ವಿಯರ ಹಿಂದಿರುಗಿ ನಾಚಿಕೆಯ ನಗು ನಕ್ಕಳು. ಸ್ಟ್ರೆಶ್ನೆಫ್ ಟೋಪಿಯನ್ನು ತೆಗೆದು, ಜೀನಿನಿಂದ ಕೆಳ ಬಗ್ಗಿ, ಅವಳ ಕೈಯ್ಯನ್ನೆತ್ತಿಕೊಂಡು ದೀರ್ಘವಾಗಿ ಚುಂಬಿಸಿದ. ಅವಳ ತುಟಿಗಳು ಅವನ ಬೂದು ಬಣ್ಣಕ್ಕೆ ತಿರುಗುತ್ತಿದ್ದ ಕೆನ್ನೆಗಳಿಗೆ ಆತುಕೊಂಡವು. ಅನಂತರ, 'ಡಿಯರ್ ಆಂಡ್ರೆ ಹುಷಾರಾಗಿರು, ಆರೋಗ್ಯದ ಬಗ್ಗೆ ಗಮನ ಕೊಡು, ನನ್ನ ಬಗ್ಗೆ ಕೆಟ್ಟದಾಗಿ ಯೋಚಿಸಬೇಡ' ಅಂದಳು ಮೆಲ್ಲಗೆ.

ಗಾಡಿ ಮುಖ್ಯ ರಸ್ತೆಯನ್ನು ತಲುಪುತ್ತಿದ್ದಂತೆ, ಗಾಡಿ ಹೊಡೆಯುತ್ತಿದ್ದವನು ಗಾಡಿಯನ್ನು ಕುಕ್ಕಲೋಟದಲ್ಲಿ ಓಡಿಸತೊಡಗಿದ. ಹಾಗೆ ಓಡತೊಡಗಿದ ಗಾಡಿಯ ದಡಬಡ ಸದ್ದು ದೂರಾಗತೊಡಗಿತು. ಹಿಂದಕ್ಕೆ ತಿರುಗಿದ ಸ್ಟ್ರೆಶ್ನೆಫ್ ದಾರಿ ಯಾವುದೆಂದೂ ನೋಡದೆ ಎದುರಿಗಿದ್ದ ಬಯಲಿನಲ್ಲಿ ಕುದುರೆಯನ್ನು ನಡೆಸತೊಡಗಿದ. ಕೊಂಚ ದೂರದಲ್ಲಿ ನಾಯಿ ಚಿನ್ನದ ರೇಕಿನ ಬಯಲಲ್ಲಿ ಅಲ್ಲಲ್ಲಿ ನಿಂತು, ಅವನನ್ನು ಹಿಂಬಾಲಿಸುತ್ತಿತ್ತು. ಸ್ಟ್ರೆಶ್ನೆಫ್ ಆಗಾಗ ನಿಂತು ಅದನ್ನು ಬೇಟೆಯ ಚಾವಟಿಯ ಕೋಲಿನಿಂದ ಗದರಿಸುತ್ತಿದ್ದ. ಆಗ ನಾಯಿ ಕೂಡಾ ಓಡುವುದನ್ನು ನಿಲ್ಲಿಸಿ, ಕುಂಡಿಗಳ ಮೇಲೆ ಕೂತು, 'ಅದು ಸರಿ, ನಾನೀಗ ಎಲ್ಲಿಗೆ ಹೋಗಲಿ?' ಅನ್ನುವಂತೆ ಅವನನ್ನೇ ನೋಡುತ್ತಿತ್ತು.

